ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಪಟಾಕಿಗೆ ಆನೆಗಳು ಹೋಗುವುದಿಲ್ಲ. ಈಗ ಇರತಕ್ಕಂಥ ಸ್ಟಾಫ್‌ಗಳಿಂದ ಅವರು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ವಿಶೇಷವಾಗಿ ಒಂದು ವನ್ಯಜೀವಿ ಉಪ ವಿಭಾಗವನ್ನು ತೆರೆದು ಅವರಿಗೆ ಮೆನ್ ಕೊಡಿ, ಹೊರಗಡೆ ಎಲ್ಲೆಲ್ಲಿಯೋ ಗಾರ್ಡ್‌ಗಳು ಅಲೆಯುತ್ತಿದ್ದಾರೆ. ಅವರನ್ನೆಲ್ಲಾ ಇಲ್ಲಿ ತಂದು ಹಾಕಿ.

ಶ್ರೀ ಬಿ.ಬಿ. ನಿಂಗಯ್ಯ: ಒಂದು ನಿಮಿಷ, ಅವು ಏಕೆ ಊರಿಗೆ ಬರುತ್ತಿವೆ? ಕಾರಣ ಏನು? ಅವುಗಳಿಗೆ ಅರಣ್ಯದಲ್ಲಿ ಆಹಾರ ಸಿಗುತ್ತಿಲ್ಲ. ಇದರ ಬಗ್ಗೆ ಕಳೆದ ಒಂದು ವರ್ಷದಿಂದ ಇಲ್ಲಿ ವಿಸ್ತೃತವಾಗಿ ಚರ್ಚೆ ಆಗುತ್ತಿದೆ. ನೀವು ಆನೆಗಳಿಗೆ ಆಹಾರ ಉತ್ಪಾದನೆ ಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಲ್ಲ. ಅದಕ್ಕಾಗಿ ಮತ್ತೆ ಮತ್ತೆ ಆನೆಗಳು ದಾಳಿ ಇಡುತ್ತಿವೆ. ರೈತರಿಗೆ ಈಗ ಬೆಳೆಗೆ ಪರಿಹಾರ ಕೊಡುತ್ತೀರಿ. ಮೂರು ಕಾಸಿನ ಪ್ರಯೋಜನವಾಗುವುದಿಲ್ಲ. ಅದಕ್ಕಾಗಿ ಶಾಶ್ವತವಾಗಿ ಆನೆಗಳನ್ನು ದಾಂಡೇಲಿಗೆ ಬಿಡುತ್ತೀರೋ ಅಥವಾ ಏನು ಮಾಡುತ್ತೀರಿ ಎನ್ನು ಬಗ್ಗೆ ಶಾಶ್ವತವಾದ ಒಂದು ತೀರ್ಮಾನವನ್ನು ಕೊಡಿ.

ಅಧ್ಯಕ್ಷರು: ಅವರು ಶಾಶ್ವತವಾದ ಪರಿಹಾರವನ್ನು ಕೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು)(ಅರಣ್ಯ ಸಚಿವರ ಪರವಾಗಿ): ನೀವು ಶಾಶ್ವತವಾದ ಪರಿಹಾರದ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ ಎನ್ನುವುದರ ಬಗ್ಗೆ ಕೇಳಿದ್ದೀರಿ. ಅದಕ್ಕೆ ಮಾನ್ಯ ಅರಣ್ಯ ಸಚಿವರ ಕಡೆಯಿಂದಲೇ ಉತ್ತರವನ್ನು ಕೊಡಿಸಿ ಕೊಡುತ್ತೇನೆ.

8. ವಿಷಯ:–ತುಮಕೂರಿಗೆ 2015–16 ರಿಂದ ವೈದ್ಯಕೀಯ ಮಹಾವಿದ್ಯಾಲಯ ಮಂಜೂರಾಗಿದ್ದು, ಕಾಲೇಜಿನ ಕಟ್ಟಡ ಕಟ್ಟುವುದಕ್ಕೆ ಹಾಗೂ ಇತರೆ ಮೂಲ ಸೌಕರ್ಯ ಒದಗಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಡಾ॥ ರಫೀಕ್ ಅಹಮದ್.ಎಸ್ (ತುಮಕೂರು):– ಮಾನ್ಯ ಅಧ್ಯಕ್ಷರೆ, ತುಮಕೂರಿಗೆ 2015–16 ರಿಂದ ವೈದ್ಯಕೀಯ ಮಹಾವಿದ್ಯಾಲಯ

ಮಂಜೂರಾಗಿದ್ದು, ಇದುವರೆಗೆ ಕಟ್ಟಡ ಕಟ್ಟುವುದಕ್ಕೆ ಹಾಗೂ ಇತರೆ ಮೂಲ ಸೌಕರ್ಯ ಕಾಮಗಾರಿಯಾಗಲಿ ಏನು ಶುರು ಮಾಡಿಲ್ಲ. ಹಾಗಾಗಿ ನಾನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಈ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ?

ಡಾ॥ ಶರಣ ಪ್ರಕಾಶ ಆರ್.ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು): ತುಮಕೂರಿನಲ್ಲಿ 2015–16 ನೇ ಸಾಲಿನಿಂದ 150 ಎಂಬಿಬಿಎಸ್ ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದ್ದು, ಸದರಿ ವೈದ್ಯಕೀಯ ಕಾಲೇಜಿನ ಹೆಸರನ್ನು ತುಮಕೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಎಂಬ ಹೆಸರಿನೊಂದಿಗೆ ಸ್ವಾಯತ್ತ ಸಂಸ್ಥೆಯನ್ನಾಗಿ ಘೋಷಿಸಲಾಗಿದೆ. ಸದರಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಅಕುಕ 173 ಎಂಪಿಎಸ್ 2014, ದಿನಾಂಕ 17.06.2014 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಲಭ್ಯವಿರುವ ಜಮೀನನ್ನು ತುಮಕೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೆಸರಿಗೆ ವರ್ಗಾಯಿಸಲು ಅನುಮತಿ ನೀಡಲಾಗಿದೆ. ಸದರಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನು ಲಭ್ಯವಾದ ಕೂಡಲೇ ಸವಿವರ ಅಂದಾಜು ಪಟ್ಟಿ ಹಾಗೂ ನೀಲನಕ್ಷೆಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು, ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದೇವೆ. ಈಗಾಗಲೇ 2015–16ನೇ ಸಾಲಿಗೆ ತುಮಕೂರಿಗೆ ಒಂದು ವೈದ್ಯಕೀಯ ಕಾಲೇಜ್ ಅನ್ನು ಸರ್ಕಾರದಿಂದ ಮಾಡಬೇಕು ಎನ್ನುವಂಥದ್ದು ಬಜೆಟ್‌ನಲ್ಲಿ ಘೋಷನೆ ಮಾಡಿದ್ದೇವೆ. ಈಗ ಆ ಸ್ಥಳವನ್ನು ಇವತ್ತು ವರ್ಗಾವಣೆ ಮಾಡುತ್ತಿದ್ದೇವೆ, ಅದಕ್ಕೆ ಸರ್ಕಾರಿ ಆದೇಶ ಕೂಡ ಆಗಿದೆ. ಆರೋಗ್ಯ ಇಲಾಖೆಯಲ್ಲಿರತಕ್ಕಂಥ ಲ್ಯಾಂಡ್ ಅನ್ನು ನಮ್ಮ ಒಂದು society ಗೆ constitute ಮಾಡಿ autonomous institute ಗೋಸ್ಕರ land ಅನ್ನು transfer ಮಾಡುವುದಕ್ಕೆ ಆದೇಶ

ಮಾಡಿದ್ದೇವೆ. Land transfer ಆದ ತಕ್ಷಣ ಮಾಡುತ್ತೇವೆ. ನಾನು Chief Architect ಗೆ ಹೇಳಿರುತ್ತೇನೆ. ಅದಕ್ಕೆ design ಕೂಡ prepare ಮಾಡುತ್ತಿದ್ದಾರೆ. ಅದನ್ನು ಮಾಡಿದ ತಕ್ಷಣ ಅದಕ್ಕೆ immediate ಆಗಿ ಟೆಂಡರ್ ಕರೆಯುವಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡತ್ತೇವೆ.

ಡಾ॥ ರಫೀಕ್ ಅಹಮದ್.ಎಸ್: ಮಾನ್ಯ ಅಧ್ಯಕ್ಷರೆ, Medical Council of India ದವರು February March inspection ಗೆ ಬರುತ್ತಾರೆ, ಅಷ್ಟರೊಳಗೆ ಕಟ್ಟಡ ಇಲ್ಲದಿದ್ದರೆ ಅವರು ಮಾನ್ಯತೆ ಕೊಡುವುದಿಲ್ಲ. ಈ ವರ್ಷ ನಾವು 6 ಮೆಡಿಕಲ್ ಕಾಲೇಜುಗಳನ್ನು ಕಳೆದುಕೊಂಡಿದ್ದೇವೆ. ಸುಮಾರು 900 ಸೀಟುಗಳನ್ನು ನಾವು ಕಳೆದುಕೊಂಡಿದ್ದೇವೆ.

ಅಧ್ಯಕ್ಷರು: Medical Collage ಕಟ್ಟಡ ಕಟ್ಟುವುದು ಎಂದರೆ ಮಾಯಾಬಜಾರ್ ಮಾಡುವುದು ಏನ್ರಿ! Land ಈಗ ಬಂದಿದೆ ಅಂತೆ, ಕೆಲಸ ಶುರು ಮಾಡುತ್ತಾರೆ. ಆಯಿತು, ಬಿಡಿ ಸಾಕು.

ಡಾ॥ ರಫೀಕ್ ಅಹಮದ್.ಎಸ್: ಫೆಬ್ರವರಿಯಲ್ಲಿ ಅನೌನ್ಸ್ ಮಾಡಿದ್ದಾರೆ ಇನ್ನೂ ಕೆಲಸ ಶುರು ಮಾಡಿಲ್ಲ.

ಅಧ್ಯಕ್ಷರು: ಯಾರಾದರೂ ಜಾದುಗೀದು ಮಾಡುತ್ತಾರೆ ನೋಡಿ ಹಾಕಿ.

ಡಾ॥ ರಫೀಕ್ ಅಹಮದ್.ಎಸ್: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಬೇಗ ಶುರು ಮಾಡುವುದಕ್ಕೆ ಹೇಳಿ.

ಡಾ॥ ಶರಣ ಪ್ರಕಾಶ್ ಆರ್.ಪಾಟೀಲ್: 8 ತಿಂಗಳು ಒಂದು ವರ್ಷದಲ್ಲಿ ಯಾವುದೇ Medical Collage ಕಟ್ಟುವುದಕ್ಕಾಗುವುದಿಲ್ಲ. ಅದಕ್ಕೆ minimum ಆಗಿ ಎರಡು ವರ್ಷ ಬೇಕಾಗುತ್ತದೆ. ಆದಷ್ಟು ಬೇಗ ಮಾಡುತ್ತೇವೆ.

ಅಧ್ಯಕ್ಷರು: ಪಕ್ಕದಲ್ಲಿ ಒಂದು ಮೆಡಿಕಲ್ ಕಾಲೇಜು ಇದೆ. ಅದನ್ನು ಖಾಲಿ ಮಾಡಿ ಅದರಲ್ಲಿ ನಿಮ್ಮದು ನಡೆಸಿ, ಮಾನ್ಯ ಸುರೇಶ್‌ಗೌಡ.ಬಿ. ಕೇಳಿ.

9. ವಿಷಯ:– ತುಮಕೂರು ಕೆರೆಯಿಂದ ನೀರು ಒದಗಿಸುವ ಕುರಿತು.